# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ ಭಾಗ-2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಸೋಮವಾರ, ದಿನಾಂಕ:14ನೇ ಸೆಪ್ಟೆಂಬರ್ 2020**

**ಸಂಖ್ಯೆ: 77**

ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳ ಇಲಾಖೆಯ ವತಿಯಿಂದ ದಿನಾಂಕ:31.07.2020, 14.08.2020, 28.08.2020 ಹಾಗೂ 28.08.2020 ರಂದು ಹೊರಡಿಸಿರುವ ಕೈಗಾರಿಕಾ ವಿವಾದಗಳು ಮತ್ತು ಕೆಲವು ಇತರ ಕಾನೂನುಗಳ (ಕರ್ನಾಟಕ ತಿದ್ದುಪಡಿ) ಅಧ್ಯಾದೇಶ, 2020 (ಕರ್ನಾಟಕ ಅಧ್ಯಾದೇಶ ಸಂಖ್ಯೆ-15) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ (ನಿರಸನಗೊಳಿಸುವ ) ಅಧ್ಯಾದೇಶ. 2020 (ಕರ್ನಾಟಕ ಅಧ್ಯಾದೇಶ ಸಂಖ್ಯೆ -19) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ) ಅಧ್ಯಾದೇಶ, 2020 (ಕರ್ನಾಟಕ ಅಧ್ಯಾದೇಶ ಸಂಖ್ಯೆ-20)ರ ಪ್ರತಿಗಳನ್ನು **https://erajyapatra. karnataka.gov.in/** ನಲ್ಲಿ ಅಥವಾ ವಿಧಾನ ಪರಿಷತ್ತಿನ ಅಂತರ್ಜಾಲ ತಾಣ **www.kla.kar.nic.in/council/council.htm** ದಲ್ಲಿ ಪಡೆದುಕೊಳ್ಳಬಹುದಾಗಿದೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ

**ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಿಗೆ.**

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ


| ಭಾಗ – ೪<br>Part – IV | ಬೆಂಗಳೂರು, ಶುಕ್ರವಾರ ೨೮, ಆಗಸ್ಟ್ , ೨೦೨೦( ಭಾದ್ರಪದ, ೬, ಶಕವರ್ಷ, ೧೯೪೨)<br>Bengaluru, FRIDAY, 28, AUGUST, 2020( BHADRAPADA, 6, ShakaVarsha,1942) | ನಂ. ೩೭೩<br>No. 373 |
|---|---|---|


**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಸಂವ್ಯಶಾಇ 50 ಶಾಸನ 2020, ಬೆಂಗಳೂರು, ದಿನಾಂಕ: 28.08.2020**

**ಅಧಿಸೂಚನೆ**

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ) ಅಧ್ಯಾದೇಶ, 2020 ಇದಕ್ಕೆ 2020ರ ಆಗಸ್ಟ್ ತಿಂಗಳ 28ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 20 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2020 ರ ಕರ್ನಾಟಕ ಅಧ್ಯಾದೇಶಸಂಖ್ಯೆ: 20**

**ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ) ಅಧ್ಯಾದೇಶ, 2020**

(ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿತವಾಗಿ 2020ರ ಅಗಸ್ಟ್ 28ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2012ನ್ನು (2013ರ ಕರ್ನಾಟಕ ಅಧಿನಿಯಮ 12) ನಿರಸನಗೊಳಿಸಲು ಒಂದು ಅಧ್ಯಾದೇಶ.

ಕರ್ನಾಟಕ ವಿಧಾನಸಭೆ ಮತ್ತು ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿ ಇಲ್ಲದಿರುವುದರಿಂದ ಮತ್ತು ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಅಧ್ಯಾದೇಶವನ್ನು ಪ್ರಖ್ಯಾಪಿಸಲು, ಶೀಘ್ರ ಕ್ರಮವನ್ನು ತೆಗೆದುಕೊಳ್ಳುವುದು ಅವಶ್ಯಗೊಳಿಸುವಂಥ ವಿದ್ಯಮಾನಗಳು ಉಂಟಾಗಿವೆಯೆಂದು ಕರ್ನಾಟಕ ಮಾನ್ಯ ರಾಜ್ಯಪಾಲರಿಗೆ ಮನದಟ್ಟಾಗಿರುವುದರಿಂದ;

ಆದ್ದರಿಂದ ಈಗ, ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕದ ರಾಜ್ಯಪಾಲರು ಈ ಮುಂದಿನ ಅಧ್ಯಾದೇಶವನ್ನು ಪ್ರಖ್ಯಾಪಿಸಿದ್ದಾರೆ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) ಈ ಅಧ್ಯಾದೇಶವನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ) ಅಧ್ಯಾದೇಶ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ನಿರಸನ ಮತ್ತು ಉಳಿಸುವಿಕೆಗಳು.**- ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2012ನ್ನು (2013ರ ಕರ್ನಾಟಕ ಅಧಿನಿಯಮ 12) ಈ ಮೂಲಕ ನಿರಸನಗೊಳಿಸಲಾಗಿದೆ :

ಪರಂತು ಅಂಥ ನಿರಸನವು,

(ಎ) ಹಾಗೆ ನಿರಸನಗೊಂಡ ಯಾವುದೇ ಅಧಿನಿಯಮದ ಅಥವಾ ಅದರ ಮೇರೆಗೆ ಕ್ರಮಬದ್ಧವಾಗಿ ಮಾಡಲಾದ ಅಥವಾ ಮಾಡಲಡೆಗೊಟ್ಟ ಯಾವುದೇ ಕಾರ್ಯದ ಪೂರ್ವಜಾರಿಯನ್ನು ಬಾಧಿಸತಕ್ಕದ್ದಲ್ಲ; ಅಥವಾ

(ಬಿ) ಹಾಗೆ ನಿರಸಿತವಾದ ಯಾವುದೇ ಅಧಿನಿಯಮದ ಮೇರೆಗೆ ಆರ್ಜಿಸಲಾದ, ಪ್ರಾಪ್ತವಾದ ಅಥವಾ ವಹಿಸಲಾದ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ ಅಥವಾ ಹೊಣೆಗಾರಿಕೆಯನ್ನು ಬಾಧಿಸತಕ್ಕದ್ದಲ್ಲ; ಅಥವಾ

(ಸಿ) ಹಾಗೆ ನಿರಸನವಾದ ಯಾವುವೇ ಅಧಿನಿಯಮಗಳ ವಿರುದ್ಧ ಮಾಡಲಾದ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ, ಗುರಿಯಾದ ಯಾವುದೇ ದಂಡ, ಮುಟ್ಟುಗೋಲು ಅಥವಾ ಶಿಕ್ಷೆಯನ್ನು ಬಾಧಿಸತಕ್ಕದ್ದಲ್ಲ; ಅಥವಾ

(ಡಿ) ಮೇಲೆ ಹೇಳಿದಂಥ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ, ಹೊಣೆಗಾರಿಕೆ, ದಂಡ, ಮುಟ್ಟುಗೋಲು ಅಥವಾ ಶಿಕ್ಷೆಗೆ ಸಂಬಂಧಿಸಿದ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯವನ್ನು ಬಾಧಿಸತಕ್ಕದ್ದಲ್ಲ; ಮತ್ತು ನಿರಸನಗೊಳಿಸುವ ಅಧ್ಯಾದೇಶವನ್ನು ಅಂಗೀಕರಿಸಿಲ್ಲದಿದ್ದರೆ ಹೇಗೋ ಹಾಗೆ ಅಂಥ ಯಾವುದೇ ತನಿಖೆಯನ್ನು, ಕಾನೂನು ವ್ಯವಹರಣೆಯನ್ನು ಅಥವಾ ಪರಿಹಾರೋಪಾಯವನ್ನು ನಡೆಸಬಹುದು, ಮುಂದುವರೆಸಬಹುದು ಅಥವಾ ಜಾರಿಗೆ ತರಬಹುದು ಮತ್ತು ಅಂಥ ಯಾವುದೇ ದಂಡ, ಮುಟ್ಟುಗೋಲು ಅಥವಾ ಶಿಕ್ಷೆಯನ್ನು ವಿಧಿಸಬಹುದು.

**ವಜುಭಾಯಿವಾಲಾ**
ಕರ್ನಾಟಕದ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ
ರಚನೆ ಇಲಾಖೆ.

## PARLIAMENTARY AFFAIRS AND LEGISLATION SECRETARIAT

## NOTIFICATION

## No.: DPAL 50 SHASANA 2020, BENGALURU, DATED: 28.08.2020

Ordered that the translation of ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ) ಅಧ್ಯಾದೇಶ, 2020 (2020 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 20) in English language, be published as authorized by the Governor of Karnataka under clause (3) of Article 348 of the Constitution of India in the Karnataka Gazette for general information.

The following translation of Karnataka Rajya Civil Sevegala (Tantrika Shikshana Elakeya Sibbandiya Vargavane Niyantrana) (Nirasanagolisuva) Adhyadesha, 2020 (2020 ra Karnataka Adhyadesha sankhye: 20 ) in English language is published in the Official Gazette as authorized by the Governor of Karnataka under clause (3) of Article 348 of the Constitution of India.

## KARNATAKA ORDINANCE NO. 20 OF 2020

## THE KARNATAKA STATE CIVIL SERVICES (REGULATION OF TRANSFER OF STAFF OF DEPARTMENT OF TECHNICAL EDUCATION) (REPEAL) ORDINANCE, 2020

(Promulgated by the Governor of Karnataka in the Seventy first year of the Republic of India and First published in the Karnataka Gazette Extra-ordinary on the 28th day of August, 2020)

An Ordinance to repeal the Karnataka State Civil Services (Regulation of transfer of staff of Department of Technical Education) Act, 2012 (Karnataka Act 12 of 2013);

Whereas the Karnataka Legislative Assembly and the Karnataka Legislative Council are not in session and the Governor of Karnataka is satisfied that the circumstances exist which render it necessary for him to take immediate action to promulgate the Ordinance for the purposes hereinafter appearing;

Now, therefore, in exercise of the powers conferred by clause (1) of Article 213 of the Constitution of India, the Governor of Karnataka is pleased to promulgate the following Ordinance, namely:-

**1. Short title and commencement.-** (1) This Ordinance may be called the Karnataka State Civil Services (Regulation of transfer of staff of Department of Technical Education) (Repeal) Ordinance, 2020.

(2) It shall come into force at once.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**2. Repeal and savings.-** The Karnataka State Civil Services (Regulation of transfer of staff of Department of Technical Education) Act, 2012 (Karnataka Act 12 of 2013) is hereby repealed:

Provided that, such repeal shall not affect,-

(a) the previous operation of the Act so repealed or anything duly done or suffered thereunder; or

(b) any right, privilege, obligation or liability acquired, accrued or incurred under the Act, so repealed; or

(c) any penalty, forfeiture, or punishment incurred in respect of any offence committed under the Act so repealed; or

(d) any investigation, legal proceeding, or remedy in respect of any such right, privilege, obligation, liability, penalty, forfeiture or punishment as aforesaid; and any such investigation, legal proceedings or remedy may be instituted, continued or enforced and any such penalty, forfeiture and punishment may be imposed, as if this Ordinance had not been passed.

The above translation of **ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ) ಅಧ್ಯಾದೇಶ, 2020** (2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 20) be published in the Official Gazette under clause (3) of Article 348 of the Constitution of India.

**VAJUBHAI VALA**
**GOVERNOR OF KARNATAKA**

By order and in the name of the
Governor of Karnataka,

**(K. DWARAKANATH BABU)**

Secretary to Government
Department of Parliamentary Affairs
and Legislation.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-೫೬.

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪<br>Part – IV | ಬೆಂಗಳೂರು, **ಶುಕ್ರವಾರ** ,೨೮, ಆಗಸ್ಟ್ , ೨೦೨೦( ಭಾದ್ರಪದ, ೬, ಶಕವರ್ಷ, ೧೯೪೨)<br>Bengaluru, FRIDAY,28,AUGUST,2020( BHADRAPADA, 6, ShakaVarsha,1942) | ಸಂ. ೩೭೨<br>No. 372 |
|---|---|---|


**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಸಂವ್ಯಶಾಇ 49 ಶಾಸನ 2020, ಬೆಂಗಳೂರು, ದಿನಾಂಕ: 28.08.2020**

**ಅಧಿಸೂಚನೆ**

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ) ಅಧ್ಯಾದೇಶ, 2020 ಇದಕ್ಕೆ 2020ರ ಆಗಸ್ಟ ತಿಂಗಳ 28 ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ:19 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2020 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 19**

**ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ) ಅಧ್ಯಾದೇಶ, 2020**

(ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿತವಾಗಿ 2020ರ ಅಗಸ್ಟ 28ನೇ ದಿನಾಂಕ ದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2012ನ್ನು (2013ರ ಕರ್ನಾಟಕ ಅಧಿನಿಯಮ 12) ನಿರಸನಗೊಳಿಸಲು ಒಂದು ಅಧ್ಯಾದೇಶ.

ಕರ್ನಾಟಕ ವಿಧಾನಸಭೆ ಮತ್ತು ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿ ಇಲ್ಲದಿರುವುದರಿಂದ ಮತ್ತು ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಅಧ್ಯಾದೇಶವನ್ನು ಪ್ರಖ್ಯಾಪಿಸಲು, ಶೀಘ್ರ ಕ್ರಮವನ್ನು ತೆಗೆದುಕೊಳ್ಳುವುದು ಅವಶ್ಯಗೊಳಿಸುವಂಥ ವಿದ್ಯಮಾನಗಳು ಉಂಟಾಗಿವೆಯೆಂದು ಕರ್ನಾಟಕ ಮಾನ್ಯ ರಾಜ್ಯಪಾಲರಿಗೆ ಮನದಟ್ಟಾಗಿರುವುದರಿಂದ;

ಆದ್ದರಿಂದ ಈಗ, ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕದ ರಾಜ್ಯಪಾಲರು ಈ ಮುಂದಿನ ಅಧ್ಯಾದೇಶವನ್ನು ಪ್ರಖ್ಯಾಪಿಸಿದ್ದಾರೆ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) ಈ ಅಧ್ಯಾದೇಶವನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ) ಅಧ್ಯಾದೇಶ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ನಿರಸನ ಮತ್ತು ಉಳಿಸುವಿಕೆಗಳು.**- ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2012ನ್ನು (2013ರ ಕರ್ನಾಟಕ ಅಧಿನಿಯಮ 06) ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, ಅಂಥ ನಿರಸನವು,-

(ಎ) ಹಾಗೆ ನಿರಸನಗೊಂಡ ಯಾವುದೇ ಅಧಿನಿಯಮದ ಅಥವಾ ಅದರ ಮೇರೆಗೆ ಕ್ರಮಬದ್ಧವಾಗಿ ಮಾಡಲಾದ ಅಥವಾ ಮಾಡಲಡೆಗೊಟ್ಟ ಯಾವುದೇ ಕಾರ್ಯದ ಪೂರ್ವಜಾರಿಯನ್ನು ಬಾಧಿಸತಕ್ಕದ್ದಲ್ಲ; ಅಥವಾ

(ಬಿ) ಹಾಗೆ ನಿರಸಿತವಾದ ಯಾವುದೇ ಅಧಿನಿಯಮದ ಮೇರೆಗೆ ಆರ್ಜಿಸಲಾದ, ಪ್ರಾಪ್ತವಾದ ಅಥವಾ ವಹಿಸಲಾದ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ ಅಥವಾ ಹೊಣೆಗಾರಿಕೆಯನ್ನು ಬಾಧಿಸತಕ್ಕದ್ದಲ್ಲ; ಅಥವಾ

(ಸಿ) ಹಾಗೆ ನಿರಸನವಾದ ಯಾವುವೇ ಅಧಿನಿಯಮಗಳ ವಿರುದ್ಧ ಮಾಡಲಾದ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ, ಗುರಿಯಾದ ಯಾವುದೇ ದಂಡ, ಮುಟ್ಟುಗೋಲು ಅಥವಾ ಶಿಕ್ಷೆಯನ್ನು ಬಾಧಿಸತಕ್ಕದ್ದಲ್ಲ; ಅಥವಾ

(ಡಿ) ಮೇಲೆ ಹೇಳಿದಂಥ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ, ಹೊಣೆಗಾರಿಕೆ, ದಂಡ, ಮುಟ್ಟುಗೋಲು ಅಥವಾ ಶಿಕ್ಷೆಗೆ ಸಂಬಂಧಿಸಿದ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯವನ್ನು ಬಾಧಿಸತಕ್ಕದ್ದಲ್ಲ; ಮತ್ತು ನಿರಸನಗೊಳಿಸುವ ಅಧ್ಯಾದೇಶವನ್ನು ಅಂಗೀಕರಿಸಿಲ್ಲದಿದ್ದರೆ ಹೇಗೋ ಹಾಗೆ ಅಂಥ ಯಾವುದೇ ತನಿಖೆಯನ್ನು, ಕಾನೂನು ವ್ಯವಹರಣೆಯನ್ನು ಅಥವಾ ಪರಿಹಾರೋಪಾಯವನ್ನು ನಡೆಸಬಹುದು, ಮುಂದುವರೆಸಬಹುದು ಅಥವಾ ಜಾರಿಗೆ ತರಬಹುದು ಮತ್ತು ಅಂಥ ಯಾವುದೇ ದಂಡ, ಮುಟ್ಟುಗೋಲು ಅಥವಾ ಶಿಕ್ಷೆಯನ್ನು ವಿಧಿಸಬಹುದು.

**ವಜುಭಾಯಿವಾಲಾ**
ಕರ್ನಾಟಕದ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ
ರಚನೆ ಇಲಾಖೆ.

**PARLIAMENTARY AFFAIRS AND LEGISLATION SECRETARIAT**

**NOTIFICATION**

**No.: DPAL 49 SHASANA 2020, BENGALURU, DATED: 28.08.2020**

Ordered that the translation of ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ) ಅಧ್ಯಾದೇಶ, 2020 (2020 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 19) in English language, be published as authorized by the Governor of Karnataka under clause (3) of Article 348 of the Constitution of India in the Karnataka Gazette for general information.

The following translation of Karnataka Rajya Civil Sevegala (Kaleju Shikshana Elakeya Sibbandiya Vargavane Niyantrana) (Nirasanagolisuva) Adhyadesha, 2020 (2020 ra Karnataka Adhyadesha sankhye:19) in English language is published in the Official Gazette as authorized by the Governor of Karnataka under clause (3) of Article 348 of the Constitution of India.

# KARNATAKA ORDINANCE NO. 19 OF 2020

## THE KARNATAKA STATE CIVIL SERVICE (REGULATION OF TRANSFER OF STAFF OF DEPARTMENT OF COLLEGIATE EDUCATION) (REPEAL) ORDINANCE, 2020

(Promulgated by the Governor of Karnataka in the Seventy first year of the Republic of India and First published in the Karnataka Gazette Extra-ordinary on the 28th day of August, 2020)

An Ordinance to repeal the Karnataka State Civil Services (Regulation of transfer of staff of Department of Collegiate Education) Act, 2012 (Karnataka Act 06 of 2013);

Whereas the Karnataka Legislative Assembly and the Karnataka Legislative Council are not in session and the Governor of Karnataka is satisfied that the circumstances exist which render it necessary for him to take immediate action to promulgate the Ordinance for the purposes hereinafter appearing;

Now, therefore, in exercise of the powers conferred by clause (1) of Article 213 of the Constitution of India, the Governor of Karnataka is pleased to promulgate the following Ordinance, namely:-

**1. Short title and commencement.-** (1) This Ordinance may be called the Karnataka State Civil Services (Regulation of transfer of staff of Department of Collegiate Education) (Repeal) Ordinance, 2020.

(2) It shall come into force at once.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**2. Repeal and savings.**- The Karnataka State Civil Services (Regulation of transfer of staff of Department of Collegiate Education) Act, 2012 (Karnataka Act 06 of 2013) is hereby repealed:

Provided that, such repeal shall not affect,-

(a) the previous operation of the Act so repealed or anything duly done or suffered thereunder; or

(b) any right, privilege, obligation or liability acquired, accrued or incurred under the Act, so repealed; or

(c) any penalty, forfeiture, or punishment incurred in respect of any offence committed under the Act so repealed; or

(d) any investigation, legal proceeding, or remedy in respect of any such right, privilege, obligation, liability, penalty, forfeiture or punishment as aforesaid; and any such investigation, legal proceedings or remedy may be instituted, continued or enforced and any such penalty, forfeiture and punishment may be imposed, as if this Ordinance had not been passed.

The above translation of **ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ನಿರಸನಗೊಳಿಸುವ) ಅಧ್ಯಾದೇಶ, 2020** (2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 19) be published in the Official Gazette under clause (3) of Article 348 of the Constitution of India.

**VAJUBHAI VALA**
**GOVERNOR OF KARNATAKA**

By order and in the name of the
Governor of Karnataka,

**(K. DWARAKANATH BABU)**
Secretary to Government
Department of Parliamentary Affairs
and Legislation.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-೫೬.

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು
ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಶುಕ್ರವಾರ, ೩೧, ಜುಲೈ, ೨೦೨೦( ಶ್ರಾವಣ,೯, ಶಕವರ್ಷ ೧೯೪೨)<br>Bengaluru, FRIDAY, 31, JULY, 2020( Shravana,9, ShakaVarsha 1942) | ನಂ. ೩೨೦<br>No. 320 |
|---|---|---|


**PARLIAMENTARY AFFAIRS AND LEGISLATION SECRETARIAT**
**NOTIFICATION**

**NO. SAMVYASHAE 27 SHASANA 2020, BENGALURU, dated: 31.07.2020**

The Industrial Disputes and certain other Laws (Karnataka Amendment) Ordinance, 2020 ಇದಕ್ಕೆ ಜುಲೈ ತಿಂಗಳ 31ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 15 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**KARNATAKA ORDINANCE NO. 15 OF 2020**

**THE INDUSTRIAL DISPUTES AND CERTAIN OTHER LAWS (KARNATAKA AMENDMENT) ORDINANCE, 2020.**

(Promulgated by the Governor of Karnataka in the Seventy-first year of the Republic of India and first published in the Karnataka Gazette Extra-Ordinary on 31st day of July, 2020)

An Ordinance further to amend the Industrial Disputes Act, 1947, the Factories Act, 1948 and the Contract Labour (Regulation and Abolition) Act, 1970 to provide measures to boost easy of doing business in the State of Karnataka.

Whereas it is expedient to provide measures to boost ease of doing business in the State of Karnataka and for the matters connected therewith or incidental thereto;

Whereas previous instructions of the President of India vide Order No:14/07/2020-Judl..& PP, dated:11.07.2020 has been obtained in this regard as required under the proviso to clause (1) of Article 213 of the Constitution.

Whereas the Karnataka State Legislative Assembly and the Karnataka Legislative Council are not in session and the Governor of Karnataka is satisfied that the circumstances exist which render it necessary for him to take immediate action to promulgate the Ordinance for the purposes hereinafter appearing;

Now, therefore, in exercise of the powers conferred by clause (1) of Article 213 of the Constitution of India, the Governor of Karnataka is pleased to promulgate the following Ordinance, namely:-

**1. Short title and commencement.**-(1) This Ordinance may be called the Industrial Disputes and Certain other laws (Karnataka Amendment) Ordinance, 2020.

(2) It shall come into force at once.

**2. Amendment of the Industrial Disputes Act, 1947.-** In the Industrial Disputes Act, 1947 (Central Act No.14 of 1947), in section 25K,-

(i) in sub-section (1), for the words "one hundred", the words "three hundred", shall be substituted; and

(ii) in sub-section (1A), for the words "one hundred", the words "three hundred", shall be substituted.

**3. Amendment of the Factories Act, 1948.-** In the Factories Act, 1948 (Central Act No.63 of 1948),-

(1) in section 2, in clause (m),-

(i) in item (i) for the words "ten or more", the words "twenty or more", shall be substituted; and

(ii) in item (ii), for the words "twenty or more", the words "forty or more", shall be substituted.

(2) in section 65, in sub section (3) in clause (iv) for the words "seventy five" the words "one hundred and twenty five" shall be substituted.

**4. Amendment of the Contract Labour (Regulation and Abolition) Act, 1970.-** In the Contract Labour (Regulation and Abolition) Act, 1970 (Central Act No.47 of 1970), in section 1, in sub-section (4) in item (a) for the words "twenty or more", the words "fifty or more", shall be substituted.

**VAJUBHAI VALA**
**GOVERNOR OF KARNATAKA**

By Order and in the name of the

Governor of Karnataka,

**(K.DWARAKANATH BABU)**

Secretary to Government

Department of Parliamentary Affairs and Legislation

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 27 ಶಾಸನ 2020, ಬೆಂಗಳೂರು, ದಿನಾಂಕ: 31.07.2020

Ordered that the translation of **the Industrial Disputes and certain other Laws (Karnataka Amendment) Ordinance, 2020** (Karnataka Ordinance 15 of 2020) in Kannada language, be published as authorized by the Governor of Karnataka under section 5A of the Karnataka Official Language Act, 1963 in the Karnataka Gazette for general information.

The following translation of **the Industrial Disputes and certain other Laws (Karnataka Amendment) Ordinance, 2020** (Karnataka Ordinance 15 of 2020) in Kannada language is published in the Official Gazette under the authority of the Governor of Karnataka under section 5A of the Karnataka Official Language Act, 1963.

2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ :15

**ಕೈಗಾರಿಕಾ ವಿವಾದಗಳು ಮತ್ತು ಕೆಲವು ಇತರ ಕಾನೂನುಗಳ (ಕರ್ನಾಟಕ ತಿದ್ದುಪಡಿ) ಅಧ್ಯಾದೇಶ, 2020**

(ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿಸಲಾಗಿದೆ ಮತ್ತು 2020ರ ಜುಲೈ 31ನೇ ದಿನಾಂಕದಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಮೊದಲು ಪ್ರಕಟಿಸಲಾಗಿದೆ).

ಕರ್ನಾಟಕ ರಾಜ್ಯದಲ್ಲಿ ವ್ಯವಹಾರ ನಡೆಸುವುದನ್ನು ಸುಗಮಗೊಳಿಸಲು ಉತ್ತೇಜಿಸುವುದಕ್ಕೆ ಕ್ರಮಗಳನ್ನು ಉಪಬಂಧಿಸುವುದಕ್ಕಾಗಿ ಕೈಗಾರಿಕಾ ವಿವಾದಗಳ ಅಧಿನಿಯಮ, 1947, ಕಾರ್ಖಾನೆಗಳ ಅಧಿನಿಯಮ, 1948 ಮತ್ತು ಗುತ್ತಿಗೆ ಕಾರ್ಮಿಕರ (ನಿಯಂತ್ರಣ ಮತ್ತು ರದ್ದಿಯಾತಿ) ಅಧಿನಿಯಮ, 1970ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧ್ಯಾದೇಶ.

ಕರ್ನಾಟಕ ರಾಜ್ಯದಲ್ಲಿ ವ್ಯವಹಾರ ನಡೆಸುವುದನ್ನು ಸುಗಮಗೊಳಿಸಲು ಉತ್ತೇಜಿಸುವುದಕ್ಕೆ ಮತ್ತು ಅದಕ್ಕೆ ಸಂಬಂಧಪಟ್ಟ ಹಾಗೂ ಆನುಷಂಗಿಕವಾದ ವಿಷಯಗಳಿಗಾಗಿ ಕ್ರಮಗಳನ್ನು ಉಪಬಂಧಿಸುವುದು ಯುಕ್ತವಾಗಿರುವುದರಿಂದ;

ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದ ಪರಂತುಕದ ಅಡಿಯಲ್ಲಿ ಅಗತ್ಯಪಡಿಸಿದಂತೆ ಈ ಕುರಿತು ಭಾರತದ ರಾಷ್ಟ್ರಾಧ್ಯಕ್ಷರ ಪೂರ್ವ ಸೂಚನೆಗಳನ್ನು ಆದೇಶ ಸಂ: 14/07/2020-ಜೆಯುಡಿಎಲ್..& ಪಿಪಿ, ದಿನಾಂಕ: 11.07.2020ರ ಮೂಲಕ ಪಡೆದಿರುವುದರಿಂದ;

ಕರ್ನಾಟಕ ವಿಧಾನಸಭೆ ಮತ್ತು ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿ ಇಲ್ಲದಿರುವುದರಿಂದ ಮತ್ತು ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಅಧ್ಯಾದೇಶವನ್ನು ಪ್ರಖ್ಯಾಪಿಸಲು, ಶ್ರೀಘ್ರ ಕ್ರಮವನ್ನು ತೆಗೆದುಕೊಳ್ಳುವುದು ಅವಶ್ಯಗೊಳಿಸುವಂಥ ವಿದ್ಯಮಾನಗಳು ಉಂಟಾಗಿವೆಯೆಂದು ಕರ್ನಾಟಕದ ಮಾನ್ಯ ರಾಜ್ಯಪಾಲರಿಗೆ ಮನದಟ್ಟಾಗಿರುವುದರಿಂದ;

ಈಗ, ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕದ ರಾಜ್ಯಪಾಲರು ಈ ಮುಂದಿನ ಅಧ್ಯಾದೇಶವನ್ನು ಪ್ರಖ್ಯಾಪಿಸಿದ್ದಾರೆ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧ್ಯಾದೇಶವನ್ನು ಕೈಗಾರಿಕಾ ವಿವಾದಗಳು ಮತ್ತು ಕೆಲವು ಇತರ ಕಾನೂನುಗಳ (ಕರ್ನಾಟಕ ತಿದ್ದುಪಡಿ) ಅಧ್ಯಾದೇಶ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಕೈಗಾರಿಕಾ ವಿವಾದಗಳ ಅಧಿನಿಯಮ, 1947ರ ತಿದ್ದುಪಡಿ.-** ಕೈಗಾರಿಕಾ ವಿವಾದಗಳ ಅಧಿನಿಯಮ, 1947ರ (1947ರ ಕೇಂದ್ರ ಅಧಿನಿಯಮ ಸಂ. 14) 25ಕೆ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದಲ್ಲಿ "ಒಂದು ನೂರು" ಎಂಬ ಪದಗಳಿಗೆ "ಮೂರು ನೂರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) (1ಎ) ಉಪಪ್ರಕರಣದಲ್ಲಿ "ಒಂದು ನೂರು" ಎಂಬ ಪದಗಳಿಗೆ "ಮೂರು ನೂರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. ಕಾರ್ಖಾನೆಗಳ ಅಧಿನಿಯಮ, 1948ರ ತಿದ್ದುಪಡಿ.-** ಕಾರ್ಖಾನೆಗಳ ಅಧಿನಿಯಮ, 1948ರಲ್ಲಿ (1948ರ ಕೇಂದ್ರ ಅಧಿನಿಯಮ ಸಂ. 63),-

(1) 2ನೇ ಪ್ರಕರಣದ (ಎಂ) ಖಂಡದಲ್ಲಿ,-

(i) (i)ನೇ ಬಾಬುವಿನಲ್ಲಿ "ಹತ್ತು ಅಥವಾ ಹೆಚ್ಚಿನ" ಎಂಬ ಪದಗಳಿಗೆ "ಇಪ್ಪತ್ತು ಅಥವಾ ಹೆಚ್ಚಿನ"ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



(ii) (ii)ನೇ ಬಾಬುವಿನಲ್ಲಿ "ಇಪ್ಪತ್ತು ಅಥವಾ ಹೆಚ್ಚಿನ" ಎಂಬ ಪದಗಳಿಗೆ "ನಲವತ್ತು ಅಥವಾ ಹೆಚ್ಚಿನ"ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) 65ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿನ (iv)ನೇ ಖಂಡದಲ್ಲಿ "ಎಪ್ಪತ್ತೈದು" ಎಂಬ ಪದಗಳಿಗೆ "ಒಂದು ನೂರಾ ಇಪ್ಪತ್ತೈದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**4. ಗುತ್ತಿಗೆ ಕಾರ್ಮಿಕರ (ನಿಯಂತ್ರಣ ಮತ್ತು ರದ್ದಿಯಾತಿ) ಅಧಿನಿಯಮ, 1970ರ ತಿದ್ದುಪಡಿ.-** ಗುತ್ತಿಗೆ ಕಾರ್ಮಿಕರ (ನಿಯಂತ್ರಣ ಮತ್ತು ರದ್ದಿಯಾತಿ) ಅಧಿನಿಯಮ, 1970ರಲ್ಲಿ (1970ರ ಕೇಂದ್ರ ಅಧಿನಿಯಮ ಸಂ. 47) 1ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿನ (ಎ) ಬಾಬುವಿನಲ್ಲಿ "ಇಪ್ಪತ್ತು ಅಥವಾ ಹೆಚ್ಚಿನ" ಎಂಬ ಪದಗಳಿಗೆ "ನಲವತ್ತು ಅಥವಾ ಹೆಚ್ಚಿನ"ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

The above translation of the Industrial Disputes and Certain other laws (Karnataka Amendment) Ordinance, 2020 (Karnataka Ordinance 15 of 2020) shall be authoritative text in the Kannada language under section 5-A of the Karnataka Official Language Act, 1963 (Karnataka Act 26 of 1963).

**ವಜುಭಾಯಿ ವಾಲಾ**
ಕರ್ನಾಟಕದ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೪ ಎ<br>Part – IVA | ಬೆಂಗಳೂರು, ಶುಕ್ರವಾರ , ೧೪, ಆಗಸ್ಟ್, ೨೦೨೦ ( ಶ್ರಾವಣ ,೨೩, ಶಕವರ್ಷ, ೧೯೪೨)<br>Bengaluru, FRIDAY, 14, AUGUST, 2020 ( Shravana , 23, ShakaVarsha,1942) | ನಂ. ೩೪೭<br>No. 347 |


## PARLIAMENTARY AFFAIRS AND LEGISLATION SECRETARIAT

### NOTIFICATION

**NO. SAMVYASHAE 27 SHASANA 2020, BENGALURU, dated: 14.08.2020**

The Industrial Disputes and certain other Laws (Karnataka Amendment) Ordinance, 2020 ಇದಕ್ಕೆ ಸಂಬಂಧಿಸಿದ ತಿದ್ದೋಲೆಗೆ 2020ರ ಆಗಸ್ಟ್ ತಿಂಗಳ 12ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

## CORRIGENDUM

**Subject:** The Industrial Disputes and certain other Laws (Karnataka Amendment) Ordinance, 2020 (Karnataka Ordinance No.15 of 2020)

**Reference:** Notification No. SAMVYASHAE 27 SHASANA 2020, dated 31ST JULY, 2020 published in Part IV of the Karnataka Gazette Extraordinary No.320, dated: 31.07.2020.

*****

In the Industrial Disputes and certain other Laws (Karnataka Amendment) Ordinance, 2020 (Karnataka Ordinance No.15 of 2020) published in Notification No. SAMVYASHAE 27 SHASANA 2020, dated 31ST JULY, 2020 published in Part IV of the Karnataka Gazette Extraordinary No.320, dated: 31.07.2020 the following corrections shall be read with effect from 31.07.2020, in 5th page, in 8th line, for "**ನಲವತ್ತು ಅಥವಾ ಹೆಚ್ಚಿನ**" read, "**ಐವತ್ತು ಅಥವಾ ಹೆಚ್ಚಿನ**".

By Order and in the name of the
Governor of Karnataka

**(K.DWARAKANATH BABU)**
Secretary to Government
Department of Parliamentary Affairs
and Legislation

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



# ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 27 ಶಾಸನ 2020, ಬೆಂಗಳೂರು, ದಿನಾಂಕ: 14.08.2020**

The Industrial Disputes and certain other Laws (Karnataka Amendment) Ordinance, 2020 ಇದಕ್ಕೆ ಸಂಬಂಧಿಸಿದ ತಿದ್ದೋಲೆಗೆ 2020ರ ಆಗಸ್ಟ್ ತಿಂಗಳ 12ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

## ತಿದ್ದೋಲೆ

ವಿಷಯ: ಕೈಗಾರಿಕಾ ವಿವಾದಗಳು ಮತ್ತು ಕೆಲವು ಇತರ ಕಾನೂನುಗಳ (ಕರ್ನಾಟಕ ತಿದ್ದುಪಡಿ) ಅಧ್ಯಾದೇಶ, 2020 (2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ:15)

ಉಲ್ಲೇಖ: ಕರ್ನಾಟಕ ವಿಶೇಷ ರಾಜ್ಯಪತ್ರ ಸಂಖ್ಯೆ: 320, ದಿನಾಂಕ: 31.07.2020ರ ಭಾಗ IVರಲ್ಲಿ ಪ್ರಕಟಿಸಿದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 27 ಶಾಸನ 2020 ದಿನಾಂಕ: 31ನೇ ಜುಲೈ 2020

******

ಕರ್ನಾಟಕ ವಿಶೇಷ ರಾಜ್ಯಪತ್ರ ಸಂಖ್ಯೆ: 320, ದಿನಾಂಕ: 31.07.2020ರ ಭಾಗ IVರಲ್ಲಿ ಪ್ರಕಟಿಸಿದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 27 ಶಾಸನ 2020 ದಿನಾಂಕ: 31ನೇ ಜುಲೈ 2020ರಲ್ಲಿ ಪ್ರಕಟಣೆಗೊಂಡ ಕೈಗಾರಿಕಾ ವಿವಾದಗಳು ಮತ್ತು ಕೆಲವು ಇತರ ಕಾನೂನುಗಳ (ಕರ್ನಾಟಕ ತಿದ್ದುಪಡಿ) ಅಧ್ಯಾದೇಶ, 2020ರಲ್ಲಿ (2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ:15) ಮುಂದಿನ ತಿದ್ದುಪಡಿಗಳನ್ನು 31.07.2020ರಿಂದ ಜಾರಿಗೆ ಬರುವಂತೆ ಓದಿಕೊಳ್ಳತಕ್ಕದ್ದು. 5ನೇ ಪುಟದ 8ನೇ ಸಾಲಿನಲ್ಲಿ **"ನಲವತ್ತು ಅಥವಾ ಹೆಚ್ಚಿನ"** ಎನ್ನುವುದನ್ನು **"ಐವತ್ತು ಅಥವಾ ಹೆಚ್ಚಿನ"** ಎಂಬುದಾಗಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ.ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತುಶಾಸನ
ರಚನೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE Digitally signed by SUNIL GARDE